## ನೈಸರ್ಗಿಕ ಜೇಡಿಮಣ್ಣು

ಜೇಡಿಮಣ್ಣು ಮತ್ತು ಆಪಲ್ ಸೈಡರ್ ವಿನೆಗರ್ ಎರಡನ್ನೂ ಸಮ ಪ್ರಮಾಣದಲ್ಲಿ ಬೆರೆಸಿ ಪೇಸ್ಟ್ ಮಾಡಿಕೊಳ್ಳಿ. ಮುಖ ಮತ್ತು ಕುತ್ತಿಗೆಗೆ ಪ್ಯಾಕ್ ಹಾಕಿಕೊಂಡು 15 ನಿಮಿಷ ಬಿಟ್ಟು ತಣ್ಣೀರಿನಿಂದ ತೊಳೆಯಿರಿ. ಇದು ಎಣ್ಣೆ ಚರ್ಮದೊಳಗಿನ ಜಿಡ್ಡನ್ನು ತೆಗೆದು ನೈಸರ್ಗಿಕ ಹೊಳಪು ನೀಡುತ್ತದೆ.

ಜೇಡಿಮಣ್ಣು ಮತ್ತು ಅದಕ್ಕೆ ಅಲೋವೆರಾ ಜೆಲ್ ಮಿಶ್ರ ಮಾಡಿಕೊಂಡು ಪ್ಯಾಕ್ ಹಾಕಿಕೊಳ್ಳಿ. 15 ನಿಮಿಷ ಬಿಟ್ಟು ವೃತ್ತಾಕಾರದಲ್ಲಿ ಮಾಲಿಶ್ ಮಾಡಿಕೊಂಡು ತೊಳೆಯುವುದರಿಂದ ಮೊಡವೆ ಸಮಸ್ಯೆ ಕಡಿಮೆ ಆಗುತ್ತದೆ. ಜೇಡಿಮಣ್ಣಿನ ಜೊತೆಗೆ ಇದ್ದಿಲು ಪುಡಿ ಮತ್ತು ಅಲೋವೆರಾ ಜೆಲ್ ಬೆರೆಸಿ ಮುಖಕ್ಕೆ ಹಚ್ಚಿ ಹತ್ತು ನಿಮಿಷದ ನಂತರ ನಿಧಾನವಾಗಿ ತೊಳೆದರೆ ಬ್ಲಾಕ್ ಹೆಡ್‌ಗಳ ಸಮಸ್ಯೆ ಇರುವುದಿಲ್ಲ.

ಓಟ್ಸ್ ಪುಡಿ, ಜೇಡಿಮಣ್ಣು, ರೋಸ್ ವಾಟರ್ ಬೆರೆಸಿ ಫೇಸ್ ಪ್ಯಾಕ್ ಮಾಡಿಕೊಂಡರೆ ಮುಖದ ತ್ವಚೆ ನಯವಾಗುತ್ತದೆ. ಬೆವರುವುದು ಕಡಿಮೆ ಆಗುತ್ತದೆ. ಜೇಡಿಮಣ್ಣಿಗೆ ಮೊಸರು ಬೆರೆಸಿ ನಿತ್ಯ ಹಚ್ಚುವುದರಿಂದ ಮೊಡವೆಗಳು ಮಾಯವಾಗುತ್ತವೆ. ಜೇಡಿಮಣ್ಣಿನ ಜೊತೆಗೆ ಚಾಮೈಲ್ ಚಹಾ ಪುಡಿ ಮತ್ತು ರೋಸ್ ವಾಟರ್ ಬೆರೆಸಿ ಫೇಸ್‌ಪ್ಯಾಕ್ ಹಾಕಿಕೊಳ್ಳಿ. ಇದು ಟ್ಯಾನ್ ಮತ್ತು ಕಲೆಗಳನ್ನು ನಿವಾರಿಸುತ್ತದೆ.

## ಹುತ್ತದ ಮಣ್ಣು

ಹುತ್ತದ ಮಣ್ಣಿಗೆ ಎರಡು ಚಮಚ ಹಾಲು ಬೆರೆಸಿ ಚೆನ್ನಾಗಿ ಕರಗಿದ ನಂತರ ಕಲಸಿ ಮುಖಕ್ಕೆ ಹಚ್ಚಿ, ಅರ್ಧ ಗಂಟೆಯ ನಂತರ ತೊಳೆಯುವುದರಿಂದ ಮೊಡವೆಗಳು ಮಾಯವಾಗುತ್ತವೆ. ಇದನ್ನು ವಾರಕ್ಕೊಮ್ಮೆ ಮಾಡಿಕೊಳ್ಳುವುದರಿಂದ ಉತ್ತಮ ಫಲಿತಾಂಶ ಸಿಗುತ್ತದೆ. ಹುತ್ತದ ಮಣ್ಣಿನ ಜೊತೆಗೆ ನಿಂಬೆರಸ ಬೆರೆಸಿ ಕಣ್ಣಿನ ಸುತ್ತಲೂ ಹಚ್ಚುತ್ತ ಬಂದರೆ ಕಣ್ಣಿನ ಕಪ್ಪು ವರ್ತುಲಗಳು ಮಾಯವಾಗುತ್ತವೆ.

## ಮುಲ್ತಾನಿ ಮಿಟ್ಟಿ ಪ್ಯಾಕ್

ಬಹು ಜನಪ್ರಿಯತೆ ಗಳಿಸಿದ ಮುಲ್ತಾನಿ ಮಿಟ್ಟಿ ಫೇಸ್ ಪ್ಯಾಕ್ ಒಣಚರ್ಮ ಮತ್ತು ಎಣ್ಣೆ ಚರ್ಮ ಎರಡೂ ಬಗೆಗೆ ಸೂಕ್ತವೆನಿಸಿದೆ. ಚರ್ಮದ ಉರಿಯೂತ, ಕಪ್ಪು ಕಲೆ ತೆಗೆದುಹಾಕಿ ಸುಕ್ಕುಗಳನ್ನು ನಿವಾರಿಸುತ್ತದೆ.

ಮುಲ್ತಾನಿ ಮಿಟ್ಟಿ ಜೊತೆಗೆ ಮೊಸರು ಮತ್ತು ಜೇನುತುಪ್ಪ ಬೆರೆಸಿ ಮುಖ ಮತ್ತು ಕುತ್ತಿಗೆಗೆ ಹಚ್ಚಿಕೊಂಡು ಹದಿನೈದು ನಿಮಿಷಗಳ ನಂತರ ಸ್ವಚ್ಛಗೊಳಿಸಿ. ಮುಲ್ತಾನಿ ಮಿಟ್ಟಿ ಜೊತೆಗೆ ಪಪ್ಪಾಯ ಹಣ್ಣಿನ ಪಲ್ಪ್ ಬೆರೆಸಿ ವೃತ್ತಾಕಾರವಾಗಿ ಮುಖವನ್ನು ಮಾಲೀಶ್ ಮಾಡಿ. ಅರ್ಧ ಗಂಟೆಯ ನಂತರ ಬೆಚ್ಚಗಿನ ನೀರಿನಲ್ಲಿ ತೊಳೆಯಿರಿ. ಇದು ತ್ವಚೆಯನ್ನು ಪೋಷಿಸಿ ನೈಸರ್ಗಿಕ ಕಾಂತಿ ಕೊಡುತ್ತದೆ. ಎಣ್ಣೆ ಚರ್ಮದವರು ಮುಲ್ತಾನಿ ಮಿಟ್ಟಿ ಜೊತೆಗೆ ನಿಂಬೆರಸ ಬೆರೆಸಿ ಹಚ್ಚುವುದರಿಂದ ಹೆಚ್ಚುವರಿ ಎಣ್ಣೆ ತೆಗೆದುಹಾಕಿ, ಚರ್ಮದ ಕಾಂತಿ ಹೆಚ್ಚಿಸುತ್ತದೆ.

ಮುಲ್ತಾನಿ ಮಿಟ್ಟಿ ಜೊತೆಗೆ ರೋಸ್ ವಾಟರ್, ಶ್ರೀಗಂಧದ ಪುಡಿ ಬೆರೆಸಿ ಪ್ಯಾಕ್ ಹಾಕುವುದರಿಂದ ಮೊಡವೆಗಳು ಮಾಯವಾಗಿ ಮುಖದ ಕಾಂತಿ ಹೆಚ್ಚುತ್ತದೆ. ಈ ರೀತಿಯಲ್ಲಿ ವಿವಿಧ ಬಗೆಯ ಮಣ್ಣನ್ನು ನಿಮ್ಮ ಸೌಂದರ್ಯ ಚಿಕಿತ್ಸೆಯಲ್ಲಿ ಬಳಸಿ ತ್ವಚೆಯ ಅಂದ ಹೆಚ್ಚಿಸಿಕೊಳ್ಳಿ.

ಹುತ್ತದ ಮಣ್ಣಿನ ಜೊತೆಗೆ ಗೋಮೂತ್ರ ಬೆರೆಸಿ ಚರ್ಮಕ್ಕೆ ಹಚ್ಚಿಕೊಂಡು ಇಪ್ಪತ್ತು ನಿಮಿಷ ಬಿಟ್ಟು ತೊಳೆದರೆ ಎಲ್ಲ ಚರ್ಮದ ಸಮಸ್ಯೆಗಳು ನಿವಾರಣೆ ಆಗುತ್ತವೆ.

## ಕೆಂಪು ಮಣ್ಣಿನ ಫೇಸ್‌ಪ್ಯಾಕ್

ಕೆಂಪು ಮಣ್ಣು ಮಾರ್ಕೆಟ್‌ನಲ್ಲಿ ಸಿಗುತ್ತದೆ. ಕೆಂಪು ಮಣ್ಣಿಗೆ ಅಷ್ಟೇ ಪ್ರಮಾಣದ ರೋಸ್ ವಾಟರ್ ಮತ್ತು ಜೇನುತುಪ್ಪ ಸೇರಿಸಿ ಫೇಸ್‌ಪ್ಯಾಕ್ ಹಾಕಿಕೊಳ್ಳಿ. ಇದು ನೈಸರ್ಗಿಕ ಸ್ಕ್ರಬ್ಬಿಂಗ್. ಓಪನ್ ಪೋರ್‌ಗಳನ್ನು ಕಿರಿದುಗೊಳಿಸಿ ಚರ್ಮವನ್ನು ಬಿಗಿಗೊಳಿಸುತ್ತದೆ. ಎರಡು ದಿನಕ್ಕೊಮ್ಮೆ ಪುನರಾವರ್ತಿಸಿದರೆ ಉತ್ತಮ ಫಲಿತಾಂಶ ಸಿಗುತ್ತದೆ.

ಕೆಂಪು ಮಣ್ಣಿಗೆ ಅಷ್ಟೇ ಪ್ರಮಾಣದ ಜೇನುತುಪ್ಪ ಮತ್ತು ವಿನೆಗರ್ ಬೆರೆಸಿ ಮುಖಕ್ಕೆ ಹಚ್ಚಿಕೊಂಡು ಹತ್ತು ನಿಮಿಷದ ನಂತರ ಚೆನ್ನಾಗಿ ಮಸಾಜ್ ಮಾಡಿಕೊಳ್ಳಿ. ಇದು ನೈಸರ್ಗಿಕ ಕ್ಲೆನ್ಸಿಂಗ್ ಮಾಡುತ್ತದೆ. ಚರ್ಮದ ನಿರ್ಜೀವ ಕೋಶಗಳನ್ನು ತೆಗೆದು ಚರ್ಮವನ್ನು ಶುದ್ಧೀಕರಿಸುತ್ತದೆ. ಕೆಂಪು ಮಣ್ಣಿಗೆ ಅಷ್ಟೇ ಪ್ರಮಾಣದ ನೀರು ಬೆರೆಸಿ ಮಡ್ ಬಾತ್ (ಮೃತ್ತಿಕಾ ಸ್ನಾನ) ಮಾಡುವುದರಿಂದ ಪೂರ್ತಿ ಶರೀರದ ಚರ್ಮ ನುಣುಪಾಗಿ ಕಾಂತಿಯುಕ್ತವಾಗುತ್ತದೆ.

## ಕಪ್ಪು ಮಣ್ಣಿನಿಂದ ಫೇಸ್‌ಪ್ಯಾಕ್

ಕಪ್ಪು ಮಣ್ಣು ಒಣಚರ್ಮದವರಿಗೆ ಅನುಕೂಲಕರ. ಕಪ್ಪು ಮಣ್ಣಿನಲ್ಲಿ ಪ್ರಬಲ ಉರಿಯೂತ ನಿವಾರಕ ಮತ್ತು ಆಂಟಿ ಆಕ್ಸಿಡೆಂಟ್ ಗುಣಗಳಿದ್ದು ತ್ವಚೆಯನ್ನು ಆಳದಿಂದ ಹೊಳೆಯುವಂತೆ ಮಾಡುತ್ತದೆ. ಕಪ್ಪು ಮಣ್ಣಿಗೆ ಅಷ್ಟೇ ಪ್ರಮಾಣದ ಸೌತೆಕಾಯಿ ರಸ ಬೆರೆಸಿ ಪೇಸ್ಟ್ ಮಾಡಿಕೊಂಡು ಫೇಸ್‌ಪ್ಯಾಕ್ ಹಾಕಿಕೊಳ್ಳಿ. ಹತ್ತು ನಿಮಿಷದ ನಂತರ ತೊಳೆದು ಮಾಯಿಶ್ಚರೈಸರ್ ಹಚ್ಚಿ. ಉತ್ತಮ ಫಲಿತಾಂಶಕ್ಕಾಗಿ ವಾರಕ್ಕೆರಡು ಸಲ ಪುನರಾವರ್ತಿಸಿ.

ಕಪ್ಪು ಮಣ್ಣಿನ ಜೊತೆಗೆ ಬೇವಿನ ಪುಡಿ ಮತ್ತು ಕೊಬ್ಬರಿ ಎಣ್ಣೆ, ರೋಸ್ ವಾಟರ್ ಬೆರೆಸಿ ಚೆನ್ನಾಗಿ ಪೇಸ್ಟ್ ತಯಾರಿಸಿ. ಮುಖ ಮತ್ತು ಕುತ್ತಿಗೆಗೆ ಲೇಪಿಸಿ ಹದಿನೈದು ನಿಮಿಷದ ನಂತರ ವೃತ್ತಾಕಾರವಾಗಿ ಮಸಾಜ್ ಮಾಡಿ ತೊಳೆದುಕೊಳ್ಳಿ. ಇದು ತ್ವಚೆಗೆ ಆರ್ದ್ರತೆ ನೀಡುತ್ತದೆ. ಸೂರ್ಯನ ಕಿರಣಗಳಿಂದ ರಕ್ಷಿಸುತ್ತದೆ.

### ಜ್ವಾಲಾಮುಖಿ ಬೂದಿ ಮಣ್ಣಿನ ಫೇಸ್‌ಪ್ಯಾಕ್

ವೋಲ್ಕಾನಿಕ್ ಮಡ್ ಎನ್ನುವ ಇದು ಮಾರ್ಕೆಟ್‌ನಲ್ಲಿ ಲಭ್ಯ. ಜ್ವಾಲಾಮುಖಿ ಪ್ರದೇಶದಲ್ಲಿ ಸಂಗ್ರಹಿಸುವ ಈ ಮಣ್ಣು ಚರ್ಮಕ್ಕೆ ಉತ್ತಮ ಆರೈಕೆ ನೀಡುತ್ತದೆ. ಬ್ಯಾಕ್ಟೀರಿಯಾ ನಿರೋಧಕ ಗುಣ ಹೊಂದಿರುವ ಈ ಮಣ್ಣು ಮೊಡವೆಗಳಿಗೆ ರಾಮಬಾಣ. ವೊಲ್ಕಾನೊ ಮಡ್ ಜೊತೆಗೆ ಜೇನುತುಪ್ಪ ಮತ್ತು ಅಷ್ಟೇ ಪ್ರಮಾಣದ ಲ್ಯಾವೆಂಡರ್ ಎಣ್ಣೆ ಮಿಶ್ರಮಾಡಿ ಮುಖ ಮತ್ತು ಕುತ್ತಿಗೆಗೆ ಹಚ್ಚಿಕೊಂಡು ಹದಿನೈದು ನಿಮಿಷದ ನಂತರ ಬೆಚ್ಚಗಿನ ನೀರಿನಿಂದ ತೊಳೆದುಕೊಳ್ಳಿ. ಇದು ರಕ್ಷಣಾ ಕವಚದಂತೆ ತ್ವಚೆಯನ್ನು ಕಾಪಾಡುತ್ತದೆ. ■

